**ದಿನಾಂಕಃ 05/12/2020 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ ಅದರಲ್ಲಿ ಬರೆದಿರುವ ವಿಷಯಗಳು ನಾನೇ ಹೇಳಿ ಬರೆಸಿದ್ದೇನೆ. ಸದರಿ ಸಂಗತಿಗಳು ಸತ್ಯದಿಂದ ಕೂಡಿರುತ್ತವೆ.

**ಮುಂದೂವರೆದ ಮುಖ್ಯ ವಿಚಾರಣೆ ಅರ್ಜಿದಾರರ ಪರ ಶ್ರೀ ವಕೀಲರಿಂದಃ**

ನನ್ನ ನಿಕಾ ನಾಮದ ಪ್ರತಿಯನ್ನು ಕೊಟ್ಟಿದ್ದು ಅದನ್ನು ನಿ ಪಿ 1 ಎಂದು,
ಹಜರತ್ ಸಲ್ಮಾನ್ ಪರ್ಸಿ ದರ್ಗಾದವರು ಕೊಟ್ಟ ಒಂದು ದೃಡೀಕರಣ ಪತ್ರವನ್ನು ಕೊಟ್ಟಿದ್ದೇನೆ ಅದನ್ನು ನಿ ಪಿ 2 ಎಂದು,
ಒಂದು ಕರಾರು ಪತ್ರ ಹಾಜರು ಪಡಿಸಿದ್ದೇನೆ ಅದನ್ನು ನಿ ಪಿ -3 ಎಂದು,
ಕೆಲವು ಪೋಟೋಗಳು ಹಾಗೂ ಸಿಡಿಗಳನ್ನು ಕೊಟ್ಟಿದ್ದು, ಪೊಟೋಗಳನ್ನು ಒಟ್ಟಿಗೆ ನಿ ಪಿ 4 ಎಂದು, ಸಿಡಿಗಳನ್ನು ನಿ ಪಿ -5 ಎಂದು,
ಮತದಾರರ ಗುರುತಿನ ಚೀಟಿಯ ಪ್ರತಿಯನ್ನು ನಿ ಪಿ 6 ಎಂದು,
ಆಧಾರ ಕಾರ್ಡನ ಪ್ರತಿಯನ್ನು ನಿ ಪಿ 7 ಎಂದು,
ನನ್ನ ಗಂಡ ಮೊದಲನೇ ಹೆಂಡತಿಗೆ ತಲಾಕ್ ಕೊಟ್ಟಿದ್ದು ಅದರ ಪ್ರತಿಯನ್ನು ನಿ ಪಿ -8 ಎಂದು,
ಅದರ ಇಂಗ್ಲೀಷ್ ತರ್ಜೂಮೆ ಪ್ರತಿಯನ್ನು ನಿ ಪಿ 8 ಎ ಎಂದು,
ನನ್ನ ಮೊದಲ ಗಂಡನ ಮರಣ ಪ್ರಮಾಣ ಪತ್ರ ಕೊಟ್ಟಿದ್ದು ಅದನ್ನು ನಿ ಪಿ 9 ಎಂದು,
ಅರ್ಜಿಯಲ್ಲಿ ಕೇಳಿದಂತೆ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

Sd/-

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.